ಅನುದಾನ ಬಿಡುಗಡೆ ಮಾಡುವುದು

1117 (1260) ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಯಲ್ಲಾಪುರ) :– ಮಾನ್ಯ ಯೋಜನೆ ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಮಲೆನಾಡು ಜಿಲ್ಲೆಗಳಿಗೆ ವಿವಿಧ ಯೋಜನೆಗಳಲ್ಲಿ ಅನುದಾನವನ್ನು ಮಂಜೂರು ಮಾಡುವಾಗ ಮತಕ್ಷೇತ್ರವಾರು ಬಿಡುಗಡೆ ಮಾಡುವುದರಿಂದ ಈ ಜಿಲ್ಲೆಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ಪರಿಹರಿಸಲು ತಾಲ್ಲೂಕು ಘಟಕದ ಆಧಾರದ ಮೇಲೆ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಅನುದಾನ ಬಿಡುಗಡೆಗೊಳಿಸಲಾಗುವುದು?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು) :–

ಅ) ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಹೊರೆತುಪಡಿಸಿ, ಯಾವುದೇ ಯೋಜನೆಯಲ್ಲಿ ಅನುದಾನವನ್ನು ಮತಕ್ಷೇತ್ರವಾರು ಹಂಚಿಕೆ/ಬಿಡುಗಡೆ ಮಾಡುವ ವದ್ಧತಿಯು ಇರುವುದಿಲ್ಲ.

ಆ) ಇಲ್ಲ

ಇ) ಅನ್ವಯಿಸುವುದಿಲ್ಲ

ಒಳಚರಂಡಿ ನೀರು ರಸ್ತೆಗಳಲ್ಲಿ ಹರಿಯುತ್ತಿರುವುದು

1118 (867) ಶ್ರೀ ಅಶೋಕ್ ಆರ್. (ಪದ್ಮನಾಭ ನಗರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬೆಂಗಳೂರು ನಗರದ ರಸ್ತೆಗಳಲ್ಲಿನ ಛೇಂಬರ್‌ಗಳಿಂದ ಒಳಚರಂಡಿ ನೀರು ಹರಿಯುತ್ತಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವ ಬಗ್ಗೆ ದೂರುಗಳು ಬಂದಿದೆಯೇ;

ಆ) ಹಾಗಿದ್ದಲ್ಲಿ, ಈವರೆವಿಗೂ ಸರಿಪಡಿಸದೆಯಿರಲು ಕಾರಣಗಳೇನು; ಈ ಬಗ್ಗೆ ಕೈಗೊಂಡ ಕ್ರಮವೇನು; ಈ ಅವ್ಯವಸ್ಥೆಯನ್ನು ಎಂದು ಸರಿಪಡಿಸಲಾಗುವುದು;

ಇ) ಬೆಂಗಳೂರಿನಲ್ಲಿ ಎಷ್ಟು ತೆರೆದ ಮ್ಯಾನ್‌ಹೋಲ್‌ಗಳಿವೆ; ಈ ಬಗ್ಗೆ ಸಮೀಕ್ಷೆ ಮಾಡಲಾಗಿದೆಯೇ;

ಈ) ತೆರೆದ ಮ್ಯಾನ್‌ಹೋಲ್‌ಗಳನ್ನು ಮುಚ್ಚಲು ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :–

ಅ) ಪ್ರತಿ ಮಾಹೆಯಾನ ಸರಾಸರಿ 1200 ರಿಂದ 1800 ದೂರುಗಳು ಬರುತ್ತವೆ.

ಆ) ನಾಗರೀಕರು ಹಾಗೂ ಗ್ರಾಹಕರಿಂದ ತ್ಯಾಜ್ಯ ನೀರು ರಸ್ತೆ ಮೇಲೆ ಹರಿಯುವ ದೂರುಗಳು ಬಂದ ಕೂಡಲೇ ಆ ಸ್ಥಳವನ್ನು ಪರಶೀಲಿಸಿ ಜೆಟ್ಟಿಂಗ್ ಹಾಗೂ ಸಕ್ಕಿಂಗ್ ಯಂತ್ರದ ಮೂಲಕ ಒಳಚರಂಡಿ ಕೊಳವೆಗಳಲ್ಲಿ ಹಾಗೂ ಇಳಿಗುಂಡಿಗಳಲ್ಲಿ ಇರುವ ಅಡಚಣೆಯನ್ನು ತೆಗೆದು ಸಮಸ್ಯೆಯನ್ನು ಬಗೆಹರಿಸಲಾಗುವುದು. ಕೆಲವೊಮ್ಮೆ ಹಾಲಿ ಇರುವ ಕಿರಿಯ ಗಾತ್ರದ ಹಾಗೂ ಒಡೆದು ಹೋಗಿರುವ ಒಳಚರಂಡಿ ಕೊಳವೆಗಳನ್ನು ಹೊಸದಾದ ದೊಡ್ಡ ಗಾತ್ರದ ಕೊಳವೆಗಳ ಮುಖಾಂತರ ಬದಲಾಯಿಸಿ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಲಾಗುವುದು.

ಇ) ಪ್ರಸ್ತುತ ಬೆಂಗಳೂರು ಜಲಮಂಡಳಿ ವ್ಯಾಪ್ತಿಯಲ್ಲಿ ಸುಮಾರು 1,50,600 ಒಳಚರಂಡಿಯ ಇಳಿಗುಂಡಿಗಳಿದ್ದು, ಇವುಗಳಲ್ಲಿ ಯಾವುದೇ ತೆರೆದ ಇಳಿಗುಂಡಿಗಳಿರುವುದಿಲ್ಲ. ಕೆಲವೊಮ್ಮೆ ಬಾರಿ ವಾಹನ ಸಂಚಾರದಿಂದ ಇಳಿಗುಂಡಿಗಳು ಒಡೆದು ಹೋಗಿರುತ್ತವೆ. ಇದರ ಬಗ್ಗೆ ದೂರು ಬಂದಲ್ಲಿ ಆದಷ್ಟು ಬೇಗನೆ ದುರಸ್ಥಿ ಮಾಡಿ ಮುಚ್ಚಳಗಳನ್ನು ಅಳವಡಿಸಿ ಸಮಸ್ಯೆಯನ್ನು ಸರಿವಡಿಸಲಾಗುವುದು.

ಈ) ಇದರ ಬಗ್ಗೆ ನಾಗರೀಕರಿಂದ/ಗ್ರಾಹಕರಿಂದ ದೂರು ಬಂದಲ್ಲಿ 24 ಗಂಟೆಯೊಳಗೆ ಮುಚ್ಚಳಗಳನ್ನು ಅಳವಡಿಸಿ ಸಮಸ್ಯೆಯನ್ನು ಸರಿಪಡಿಸಲಾಗುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಭಜನೆ

1119 (868) ಶ್ರೀ ಅಶೋಕ್ ಆರ್. (ಪದ್ಮನಾಭ ನಗರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜನೆ ಮಾಡಲು ಸರ್ಕಾರ ನಿರ್ಧರಿಸಿದೆಯೇ: ಹಾಗಿದ್ದಲ್ಲಿ ಕಾರಣವೇನು;

ಆ) ವಿಭಜನೆ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಎಷ್ಟು ಭಾಗವಾಗಿ ವಿಭಜನೆ ಮಾಡಲಾಗುವುದು;

ಇ) ವಿಭಜನೆಯಿಂದಾಗಿ ಆಗುವ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡಲಾಗಿದೆಯೇ ? (ವರದಿಯ ವಿವರ ನೀಡುವುದು)